ಶ್ರೀ ಟಿ. ಎನ್ ನರಸಿಂಹಮೂರ್ತಿ (ಬಂದರು, ಮೀನುಗಾರಿಕೆ, ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಮೈಸೂರಿನ ಗಣೇಶ ಚಿತ್ರಮಂದಿರದ ಮುಂಭಾಗದಲ್ಲಿ ಕಟ್ಟುತ್ತಿರುವ ವಾಣಿಜ್ಯ ಸಂಕೀರ್ಣದ ಅಂದಾಜು ವೆಚ್ಚ ರೂ. ೧.೮೯ ಕೋಟಿ ರೂಪಾಯಿ ಕಾಮಗಾರಿಯ ಗುತ್ತಿಗೆಯನ್ನು ದಿನಾಂಕ ೧೧ನೇ ಮೇ ೧೯೮೮ರಂದು ೧೮ ತಿಂಗಳ ಕಾಲಾವಧಿಯಲ್ಲಿ ಪೂರೈಸಲು ಮೆಸರ್ಸ್ ಖೋಡೆ ಇಂಜಿನೀಯರಿಂಗ್ ಸಂಸ್ಥೆಯವರಿಗೆ ಕೊಡಲಾಗಿತ್ತು. ಆದರೆ ಗುತ್ತಿಗೆದಾರರು ೫೫ ತಿಂಗಳ ಕಾಲಾವಧಿಯಲ್ಲಿ ಬೇಸ್‌ಮೆಂಟ್ ಬಳಿಗೆ ಕೆಲಸವನ್ನು ಸಹ ಮುಗಿಸಿರುವುದಿಲ್ಲ. ಹಾಗೂ ಮುಗಿಸುವ ಪ್ರಯತ್ನವನ್ನು ಸಹ ಮಾಡಲಿಲ್ಲ. ಆದುದರಿಂದ ಅವರ ಕೆಲಸವನ್ನು ಕರಾರಿನ ರೀತ್ಯ ರದ್ದು ಮಾಡಲಾಗಿದೆ.

ಆ) ಗುತ್ತಿಗೆದಾರರಾದ ಮೆಸರ್ಸ್ ಖೋಡೆ ಇಂಜನೀಯರಿಂಗ್‌ರವರು ನ್ಯಾಯಾಲಯದಲ್ಲಿ ದಾವೆ ಹೂಡಿರುತ್ತಾರೆ. ಸದರಿ ಕೆಲಸವನ್ನು ಬೇರೆಯವರಿಗೆ ವಹಿಸಿಕೊಡದೆ ಇರುವುದಕ್ಕೆ ತಾತ್ಕಾಲಿಕ ತಡೆಯಾಜ್ಞೆಯನ್ನು ಕೊಡಬೇಕೆಂಬ ಮನವಿಯನ್ನು ನ್ಯಾಯಾಲಯವು ೨೮ನೇ ಮೇ ೧೯೯೦ ರಂದು ತಿರಸ್ಕರಿಸಿದೆ. ಬಾಕಿ ಉಳಿದ ಕೆಲಸವನ್ನು ಕರ್ನಾಟಕ ರಾಜ್ಯ ನಿರ್ಮಾಣ ನಿಗಮಕ್ಕೆ ವಹಿಸಲು ಕ್ರಮವನ್ನು ನ್ಯಾಯಾಲಯದ ಆದೇಶಕ್ಕೆ ಒಳಪಟ್ಟು ತೆಗೆದುಕೊಳ್ಳಲಾಗುತ್ತಿದೆ.

ಇ) ಸಂಕೀರ್ಣಕ್ಕೆ ಮೀಸಲಾಗಿಟ್ಟಿರುವ ಹಣ ರೂ. ೧.೮೯ ಕೋಟಿ ರೂಪಾಯಿಗಳು ಹಾಗೂ ಇಲ್ಲಿಯವರೆಗೆ ಖರ್ಚಾಗಿರುವ ಹಣ ರೂ. ೧೯ ಲಕ್ಷಗಳು.

ಮೈಸೂರು ನಗರದಲ್ಲಿ ನೀರಿನ ಸಮಸ್ಯೆಯ ಬಗ್ಗೆ

೭೬೧(೧೫೨೪) ಶ್ರೀ ಹರ್ಷಕುಮಾರ್‌ಗೌಡ (ಚಾಮರಾಜ).—ಮಾನ್ಯ ಬಂದರು, ಮೀನುಗಾರಿಕೆ, ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಮೈಸೂರು ನಗರದಲ್ಲಿ ನೀರಿನ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು?

ಆ) ಈವರೆವಿಗೂ ಸರ್ಕಾರ ತೋಡಿಸಿದ ಕೊಳವೆ ಬಾವಿಗಳೆಷ್ಟು?

ಇ) ಅವುಗಳಲ್ಲಿ ವಿದ್ಯುತ್ ಅಳವಡಿಸಿರುವ ಕೊಳವೆ ಬಾವಿಗಳೆಷ್ಟು?

ಈ) ಈಗಿನ ಸರ್ಕಾರ ತೋಡಿಸಿದ ಬಾವಿಗಳೆಷ್ಟು?

ಶ್ರೀ ಟಿ. ಎನ್. ನರಸಿಂಹಮೂರ್ತಿ (ಬಂದರು, ಮೀನುಗಾರಿಕೆ, ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ೧) ನಾಗರೀಕರ ಈ ಸಮಸ್ಯೆಯನ್ನು ತ್ವರಿತವಾಗಿ ಪರಿಹರಿಸಲು ೯೬ ಕೊಳವೆ ಬಾವಿಗಳನ್ನು ಈ ಬೇಸಿಗೆಯಲ್ಲಿ ಕೊರೆಯಲಾಗಿದ್ದು ಅವುಗಳ ಪೈಕಿ ೨೫ ಕೊಳವೆ ಬಾವಿಗಳಿಗೆ ವಿದ್ಯುತ್ ರೇಚಕಗಳನ್ನು ಅಳವಡಿಸಲಾಗುತ್ತಿದೆ. ಉಳಿದ ಕೊಳವೆ ಬಾವಿಗಳಿಗೆ ಕೈಪಂಪುಗಳನ್ನು ಅಳವಡಿಸಲಾಗಿದೆ

೨) ಮೈಸೂರು ನಗರಕ್ಕೆ ಕಾವೇರಿ ನದಿಯಿಂದ ಹೆಚ್ಚುವರಿ ದಿನಂಪ್ರತಿ ೪೫.೪೦ ಮಿಲಿಯನ್ ಲೀಟರ್ ನೀರನ್ನು ಒದಗಿಸಲು ರೂ. ೨೬೩ ಲಕ್ಷಗಳ ಅಂದಾಜಿನ ಎರಡು ಯೋಜನೆಗಳನ್ನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಮತಿಯಿಂದ ಕೈಗೊಳ್ಳಲಾಗಿದೆ.

೩) ಮೈಸೂರು ನಗರದ ವಿತರಣಾ ವ್ಯವಸ್ಥೆಯನ್ನು ನವೀಕರಿಸಲು ಮತ್ತು ಫೀಡರ್ ಮೈನ್‌ಗಳನ್ನು ಒದಗಿಸಲು ರೂ. ೬೫೦ ಲಕ್ಷ ಅಂದಾಜಿಗೆ ಜೀವವಿಮಾ ನಿಗಮದ ಸಹಾಯದಿಂದ ಕೈಗೊಳ್ಳಲು ಸರ್ಕಾರದ ಆಡಳಿತಾತ್ಮಕ ಅನುಮೋದನೆ ದೊರೆತಿದ್ದು ಕೆಲಸವನ್ನು ಕೈಗೆತ್ತಿಕೊಳ್ಳಲು ಯೋಜಿಸಲಾಗಿದೆ.

ಳ) ನಗರದ ಶೀಘ್ರವಾದ ಬೆಳವಣಿಗೆ ಹಾಗೂ ಮುಂಬರುವ ದಶಕಗಳಲ್ಲಿ ಊಹಿಸಲಾದ ಜನಸಂಖ್ಯೆಯನ್ನು ಗಮನದಲ್ಲಿಟ್ಟುಕೊಂಡು, ಮಳಾಪುರದ ಹತ್ತಿರ ಕಾವೇರಿ ನದಿಯನ್ನು ಮೂಲವಾಗಿಟ್ಟುಕೊಂಡು ಮೈಸೂರು ನಗರದ ಳನೇ ಹಂತದ ನೀರು ಸರಬರಾಜು ಯೋಜನೆಯು ತನಿಖಾ ಹಂತದಲ್ಲಿರುತ್ತದೆ.

ಆ) ೨೪೦ ಕೊಳವೆ ಬಾವಿಗಳು.

ಇ) ೧೨೦ ಕೊಳವೆ ಬಾವಿಗಳಿಗೆ ವಿದ್ಯುತ್ ರೇಚಕ ಯಂತ್ರಗಳನ್ನು ಅಳವಡಿಸಲಾಗಿದೆ.

ಈ) ೯೬ ಕೊಳವೆ ಬಾವಿಗಳು.

ರಾಜ್ಯ ಕೇಂದ್ರ ಗ್ರಂಥಾಲಯದ ಕಟ್ಟಡದ ಬಗ್ಗೆ

೭೬೨(೧೪೭೫–ಎ) ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ).—ಮಾನ್ಯ ಶಿಕ್ಷಣ, ಯುವಜನ ಸೇವೆ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ರಾಜ್ಯ ಕೇಂದ್ರ ಗ್ರಂಥಾಲಯದ ಕಟ್ಟಡದಲ್ಲಿ (ಶೇಷಾದ್ರಿ ಅಯ್ಯರ್ ಮೆಮೋರಿಯಲ್ ಹಾಲ್) ಪುಸ್ತಕಗಳನ್ನು ಇಡಲು ಹಾಗೂ ಓದುಗರಿಗೆ ಪರಾಮರ್ಶೆ ಮಾಡುವವರಿಗೆ ಸಾಕಷ್ಟು ಸ್ಥಳಾವಕಾಶ ಇಲ್ಲದಿರುವುದು ನಿಜವೆ?

ಆ) ರಾಜ್ಯ ಮಟ್ಟದ ಗ್ರಂಥಾಲಯ ಕಟ್ಟಡಕ್ಕೆ ಇಂತಹ ದುರವಸ್ಥೆ ಬಂದಿದ್ದರೂ ಈ ಬಗ್ಗೆ ಸರ್ಕಾರ ಇತ್ತ ಕಡೆ ಗಮನ ಹರಿಸದೇ ಇರಲು ಕಾರಣಗಳೇನು? ಇದರಿಂದ ಸಾರ್ವಜನಿಕರಿಗೆ ಓದುಗರಿಗೆ ಪರಾಮರ್ಶೆ ಮಾಡುವವರಿಗೆ ತೊಂದರೆಯಾಗುವುದಿಲ್ಲವೆ?

ಇ) ರಾಜ್ಯ ಮಟ್ಟದ ಗ್ರಂಥಾಲಯಕ್ಕೆ ಈ ಕಟ್ಟಡದ ಪಕ್ಕದಲ್ಲಿ ಅಥವಾ ಬೇರೆ ಕಡೆ ಒಂದು ದೊಡ್ಡ ಕಟ್ಟಡವನ್ನು ಕಟ್ಟಿಸಿ ಅಲ್ಲಿ ಪುಸ್ತಕಗಳ ಸಂರಕ್ಷಣೆಗೆ ಓದುಗರಿಗೆ ಪರಾಮರ್ಶನಕಾರರಿಗೆ ವಿದ್ವಾಂಸರಿಗೆ ವಿದ್ಯಾರ್ಥಿಗಳಿಗೆ ಆಧುನಿಕ ರೀತಿಯ ಸೌಲಭ್ಯಗಳನ್ನು ಒದಗಿಸಿ ಕೊಡಲು ಸರ್ಕಾರ ಉದ್ದೇಶಿಸಿದೆಯೇ? ಹಾಗಿದ್ದಲ್ಲಿ ಈಗಲಾದರೂ ಇದರ ಬಗ್ಗೆ ಗಮನ ಹರಿಸಿ ಒಂದು ದೊಡ್ಡ ಗ್ರಂಥ ಭಂಡಾರ ಕಟ್ಟಡವನ್ನು ನಿರ್ಮಿಸಲು ಕ್ರಮ ತೆಗೆದುಕೊಳ್ಳಲಾಗುವುದೆ?

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ, ಯುವಜನ ಸೇವೆ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು).—

ಅ) ನಿಜ.

ಆ) ಇದರ ಬಗ್ಗೆ ಸರ್ಕಾರದ ಮಟ್ಟದಲ್ಲಿ ಪ್ರಸ್ತಾವನೆ ಇಲ್ಲ.

ಇ) ಆರ್ಥಿಕ ಸೌಲಭ್ಯವನ್ನು ಪರಿಗಣಿಸಿ ಇದರ ಸಾಧ್ಯಾಸಾಧ್ಯತೆಗಳನ್ನು ಪರಿಗಣಿಸಲಾಗುವುದು.

ಜಿಲ್ಲಾ ಮಟ್ಟದ ಗ್ರಂಥಾಲಯಗಳಿಗೆ ಸ್ವಂತ ಕಟ್ಟಡಗಳಿಲ್ಲದಿರುವ ಬಗ್ಗೆ

೭೬೩(೧೪೭೫–ಬಿ) ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ).—ಮಾನ್ಯ ಶಿಕ್ಷಣ, ಯುವಜನ ಸೇವೆ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—